# ವಿದೇಶಿ ವಾದ್ಯದ ಕಂಪು



■ ಚಿತ್ರ, ಬರಹ:
**ಆರ್.ವಿಶ್ವನಾಥ್**

ಪ್ರಸಿದ್ಧ ಯಾತ್ರಾಸ್ಥಳ ಹೃಷಿಕೇಶದ ಗಲ್ಲಿಗಳಲ್ಲಿ ಅಡ್ಡಾಡುವಾಗ ಪದೇ ಪದೇ ಒಂದು ವಿಶೇಷ ಮಾದರಿಯ ಸಂಗೀತ ವಾದ್ಯದ ಸಂಗೀತ ಕೇಳಿಬರುತ್ತಿತ್ತು. ಕುತೂಹಲದಿಂದ 'ಇದ್ಯಾವ ಸ್ವರ' ಎಂದು ವಿಚಾರಿಸಿದರೆ, 'ಅದು ಡಿಡ್ ಝಿರಿಡೂ ಎಂಬ ಸಂಗೀತ ವಾದ್ಯದ ಸ್ವರ' ಎಂದರು.

ಡಿಡ್ ಝಿರಿಡೂ ಎನ್ನುವುದು ಮೂಲತಃ ಉತ್ತರ ಆಸ್ಟ್ರೇಲಿಯಾ ಖಂಡದ ಆದಿವಾಸಿಗಳ ಅಪರೂಪದ ಸಂಗೀತ ವಾದ್ಯ. ಈ ವಾದ್ಯಕ್ಕೆ ಸುಮಾರು 1500 ವರ್ಷಗಳ ಸುದೀರ್ಘ ಇತಿಹಾಸವಿದೆಯಂತೆ. ಆಸ್ಟ್ರೇಲಿಯಾದ ಉದ್ದಗಲಕ್ಕೂ ವ್ಯಾಪಿಸಿರುವ ಈ ವಾದ್ಯವನ್ನು ವಿವಿಧ ಬುಡಕಟ್ಟು ಜನಾಂಗದವರು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಕೆಲವರು ಇದನ್ನು ಡಿಡ್‌ಜೂ ಎಂದರೆ, ಇನ್ನು ಕೆಲವರು ಘಿಂಬಾಕ್ ಎನ್ನುತ್ತಾರೆ. ಪೌಂಪು, ಮಾರ್‌ಟಬಾ ಎಂದೂ ಹಲವು ಬುಡಕಟ್ಟುಗಳವರು ಗುರುತಿಸುತ್ತಾರೆ.

ಕೊಳವೆ ಆಕಾರವಿರುವ ಸುಮಾರು 3–4 ಅಡಿ ಉದ್ದದ ಈ ವಾದ್ಯವನ್ನು ಸಾಮಾನ್ಯವಾಗಿ ಕತ್ತಾಳೆ, ಬಿದಿರು, ನೀಲಗಿರಿ ಹಾಗೂ ಕಪ್ಪು ಮರದಿಂದ ತಯಾರಿಸುತ್ತಾರೆ. ವೈವಿಧ್ಯಮಯ ಬಣ್ಣ, ವಿನ್ಯಾಸಗಳಿಂದ ಅಲಂಕಾರ ಮಾಡುತ್ತಾರೆ. ಡಿಡ್ ಝಿರಿಡೂ ಆಸ್ಟ್ರೇಲಿಯಾ ಆದಿವಾಸಿಗಳ ಉಸಿರು ಅಥವಾ ಭೂಮಿಗೀತೆ ಎಂದರೆ ತಪ್ಪಾಗಲಾರದು. ನಮ್ಮಲ್ಲಿ ಶಹನಾಯ್‌ಗೆ ಇರುವಂತೆಯೇ ಅಲ್ಲಿ ಇದಕ್ಕೆ ಪ್ರಮುಖ ಸ್ಥಾನವಿದೆ. ಅಲ್ಲಿ ನಡೆಯುವ ಸಮಾರಂಭಗಳಲ್ಲಿ ಈ ವಾದ್ಯದ ವಾದನಕ್ಕೆ ಅಗ್ರಸ್ಥಾನ.

ಇದು ನೋಡಲು ಸಾಮಾನ್ಯ ವಾದ್ಯದಂತೆ ಕಂಡರೂ ಇದು ಹೊಮ್ಮಿಸುವ ಧ್ವನಿ ನಿಜಕ್ಕೂ ಅಚ್ಚರಿ ಉಂಟು ಮಾಡುತ್ತದೆ.

ಭಾರತದಲ್ಲೂ ಈ ವಾದ್ಯದ ಬಳಕೆಯಿದೆ. ಪುಷ್ಕರ್, ಗೋವಾ, ವಾರಣಾಸಿ ಹಾಗೂ ಹೃಷಿಕೇಶದಲ್ಲಿ ಹೆಚ್ಚಾಗಿ ಈ ವಾದ್ಯ ಕಂಡು ಬರುತ್ತದೆ. ಇತ್ತೀಚೆಗೆ ಹೃಷಿಕೇಶದಲ್ಲಿ ಇದರ ತಯಾರಿಕೆಯೂ ಪ್ರಾರಂಭವಾಗಿದ್ದು ಕೈಗೆಟುಕುವ ಬೆಲೆಗಳಲ್ಲಿ ಸಿಗುತ್ತದೆ.

ಈ ವಾದ್ಯದ ಸಂಗೀತ ಮನಸ್ಸಿಗೆ ಮುದ ನೀಡುತ್ತದೆ. ಬ್ರಿಟಿಷ್ ಮೆಡಿಕಲ್ ಜರ್ನಲ್ ಪ್ರಕಾರ, 'ಈ ವಾದ್ಯ ಅಭ್ಯಾಸ ಮಾಡುವುದರಿಂದ ಅಥವಾ ನುಡಿಸುವುದರಿಂದ ನಿದ್ರಿಸುವಾಗ ಸಾಮಾನ್ಯವಾಗಿ ಕಂಡುಬರುವ ಗೊರಕೆಯ ತೊಂದರೆ ದೂರವಾಗುತ್ತದೆ.'

ಈ ವಾದ್ಯವನ್ನು ಬಳಸಿ 'ಶೂನ್ಯ' ಎಂಬ ಅಂತರರಾಷ್ಟ್ರೀಯ ವಾದ್ಯವೃಂದ 2010ರಲ್ಲಿ ಬೆಂಗಳೂರಿನಲ್ಲಿ ಮೊಟ್ಟಮೊದಲಿಗೆ ಸಂಗೀತ ಸಂಜೆಯೊಂದನ್ನು ಆಯೋಜಿಸಿತ್ತು. ಬೆಂಗಳೂರಿನ ನಿವಾಸಿ ಹಾಗೂ ಈ ಸಂಗೀತ ಶಾಲೆಯ ಸ್ಥಾಪಕರಾದ ಮೋಹನ್ ಗೋಪಿ ಈ ವಾದ್ಯ ನುಡಿಸಲು ತರಬೇತಿ ನೀಡುತ್ತಿದ್ದಾರೆ.

ಈ ಹಿಂದೆ ವಿದೇಶೀಯರಿಗೆ ಮಾತ್ರ ಸೀಮಿತವಾಗಿದ್ದ ಈ ವಾದ್ಯದತ್ತ ಇತ್ತೀಚೆಗೆ ಭಾರತೀಯರ ಒಲವೂ ಹೆಚ್ಚಾಗಿದೆ. ನೂರಾರು ಜನ ಈ ವಾದ್ಯ ನುಡಿಸುವ ತರಬೇತಿ ಪಡೆಯುತ್ತಿದ್ದಾರೆ. ಈ ವಿದೇಶಿ ವಾದ್ಯದ ಸುಮಧುರ ಧ್ವನಿ ದೇಶ, ಭಾಷೆಗಳ ಗಡಿಯನ್ನೂ ಮೀರಿ ಜನರನ್ನು ಮಂತ್ರಮುಗ್ಧಗೊಳಿಸುತ್ತಿದೆ. ವಾದ್ಯದ ಕುರಿತು ಹೆಚ್ಚಿನ ವಿವರಗಳಿಗೆ ಮೋಹನ್ ಗೋಪಿ ಅವರನ್ನು (ದೂರವಾಣಿ 91–9620190201) ಸಂಪರ್ಕಿಸಬಹುದು.

